ಶ್ರೀ ಜೆ. ನಾರಾಯಣಪ್ಪ.—ಮನೆಗಳಿಗೆ ಆದರೆ ಗ್ರಾಮದ ಹತ್ತಿರವೇ ಕೇಳುತ್ತಾರೆ. ಅದರ ಮಾತು ಬೇರೆ. ಕಾಲೊನಿ ಅಂದ ಮೇಲೆ ವ್ಯವಸಾಯದ ಕಾಲೊನಿಯೇ ಹೊರತು. . . .

ಶ್ರೀ ಕಡಿದಾಳ್ ಮಂಜಪ್ಪ.—ಕಾಲೊನಿ ಅಂದರೆ ಯಾವಾಗಲೂ ವ್ಯವಸಾಯದ ಕಾಲೊನಿ ಆಗುವುದಿಲ್ಲ Colony of Government Officers, Colony of Electrical Departmental Works, Labour Colony ಈ ರೀತಿ ಎಲ್ಲಾ ಇರುತ್ತದೆ. ಮೊದಲೇ ಅರಿಕೆ ಮಾಡಿಕೊಂಡ ಹಾಗೆ, ಹತ್ತಿರ ಎಲ್ಲಾ ದರು ಜಮೀನಿದ್ದರೆ ಜಮೀನು ಕೊಡಿನುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜೆ. ನಾರಾಯಣಪ್ಪ.—200 ಎಕರೆ ಜಮೀನು ಆ ಗ್ರಾಮದಲ್ಲಿ ಇದೆ. ಅದನ್ನು ಕೆಲವು ಜನ ಅಧಿಕಾರಿ ಗಳು ಹೋಗಿ ನೋಡಿ ಪರೀಕ್ಷೆ ಮಾಡಿದ್ದಾರೆ. ಅದರ ಉದ್ದೇಶ ಏನು, ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಪರಿಶೀಲನೆ ಮಾಡುತ್ತೇನೆ.

Boyi Hostel at Chintamani.

Q.—501. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) whether they have received any representation from the manager of the Boyi Hostel situated at Chintamani Town, Chintamani Taluk, praying for the grant of land in aid of the said Boyi Hostel, available near the villages of Ganjeegunte and Doddabanderughatta of Sidlaghatta Taluk ;

(*b*) if so, the date of the said representation and whether any steps have been taken in this behalf ;

(*c*) the stage at which the said records now stand, if any action has been taken ;

(*d*) (i) whether they would grant the extent of land requested for by them ;

(ii) whether the land requested for is an assessed waste land or a gomal land ?

A.—Sri Kadidal MANJAPPA (Minister for Revenue and Public Works).—

(*a*) Yes.

(*b*) (i) 30-10-1951 and 30-10-1952.

(ii) Yes.

(*c*) The request of the Manager of the Boyi Hostel was rejected.

(*d*) (i) Does not arise in view of the reply to clause (*c*).

(ii) Assessed waste land.

ಶ್ರೀ ಜೆ. ನಾರಾಯಣಪ್ಪ.—ಈ ಜಮೀನಿಗೆ ಗೆಜೆಟೆಡ್ ಆಫೀಸರು ಯಾರಾದರೂ ಹೋಗಿ ಪರೀಕ್ಷೆ ಮಾಡಿ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆಯೆ ? ಆದ್ದರಿಂದ ದರಖಾಸ್ತು ಕೊಡಬೇಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಅರ್ಜಿ ಕೊಟ್ಟರೆ ಯಾರಾದರೂ ಗೆಜೆಟೆಡ್ ಆಫೀಸರು ಸ್ವಳಕ್ಕೆ ಹೋಗಿ ತೀರ್ಮಾನಮಾಡುವಂತೆ ನಾನು ಆಜ್ಞೆಮಾಡುತ್ತೇನೆ.

Non-Gazetted Officers of Revenue Department in Chikmagalur District (Gradation list).

Q.—599. Sri Y. M. CHANDRASEKHARIAH (Kadur).—

Will the Government be pleased to state :—

(*a*) whether the list of non-gazetted officers and other subordinates has been prepared in the Revenue Department in Chikmagalur District since 1942 ;

(*b*) of them, the number of persons confirmed ;

(*c*) the number of unqualified persons confirmed since 1942 ;

(*d*) the number of qualified people not confirmed ;

(*e*) whether qualified persons would be confirmed in their respective appointments ?

A.—Sri Kadidal MANJAPPA (Minister for Revenue and Public Works).—

(*a*) Yes. Up to 1947. The gradation list for 1954 is prepared and is ready for circulation.

(*b*) 79.

(*c*) 1.

(*d*) 60.

(*e*) Yes, as and when vacancies are available.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಗೆಜೆಟೆಡ್ ಲಿಸ್ಟನ್ನು 1942 ರಿಂದ ಏಕೆ ತಯಾರಿಸಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ತಡವಾಗಿದೆ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—'ಎ' ಮತ್ತು 'ಬಿ' ಲಿಸ್ಟ್ ಎಂದು ಇದರಲ್ಲಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ವಿಚಾರಮಾಡಬೇಕು.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—'ಎ' ಲಿಸ್ಟ್ ನವರನ್ನು ತೆಗೆದುಕೊಂಡು ಹೋಗಿ 'ಬಿ' ಲಿಸ್ಟ್‌ಗೆ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ, ಇನ್ನೂ ಆಜ್ಞೆರು ಪಟ್ಟಿ ಮಾಡಿಲ್ಲ.

ಶ್ರೀ ಪ್ಯೆ. ಎಂ. ಚಂದ್ರಶೇಖರಯ್ಯ.—ಖಾಯಂ ಮಾಡಿರುವ 79 ಜನರ ಪ್ಯೆಕಿ 'ಎ' ಲಿಸ್ಟಿನವರನ್ನು

(ಶ್ರೀ ಜೈ. ಎಂ. ಚಂದ್ರಶೇಖರಯ್ಯ.)

'ಬಿ' ಲಿಸ್ಟಿಗೂ, 'ಬಿ' ಲಿಸ್ಟಿನವರನ್ನು 'ಎ' ಲಿಸ್ಟಿಗೂ ಹಾಕಿರುವುದು ಸರ್ಕಾರದ ಅವಗಾಹನೆಗೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಟಿ. ಸಿ. ಬನಪ್ಪ.—1947ರಿಂದ 1954ರ ವರೆಗೂ ಯಾರಿಗೂ ಖಾಯಂ ಮಾಡಿಲ್ಲವೇ? ಇಕ್ರಿ ಮೆಂಟ್ ಕೊಟ್ಟಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್; ಕೊಟ್ಟಿರ ಬಹುದು.

ಶ್ರೀ ಟಿ. ಸಿ. ಬನಪ್ಪ.—ಯಾವ ಆಧಾರದ ಮೇಲೆ ಕೊಡಲಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಸರ್ವಿಸ್ ಆಧಾರದ ಮೇಲೆ ಮತ್ತು ಯಾವ ತಾರೀಖಿನಲ್ಲಿ ಕೆಲಸಕ್ಕೆ ಸೇರಿದರೋ ಅದರ ಆಧಾರದಮೇಲೆ.

ಶ್ರೀ ಟಿ. ಸಿ. ಬನಪ್ಪ.—ಗ್ರೆಡೇಷ್ಷನ್ ಲಿಸ್ಟ್ ಇಲ್ಲದಿರುವಾಗ ಯಾವ ಲಿಸ್ಟಿನ ಪ್ರಕಾರ ಹಾಗೆ ಮಾಡಲಾಗಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಗ್ರೆಡೇಷ್ಷನ್ ಲಿಸ್ಟ್ ರ್ಯಾಂಕ್ ನಿಗದಿ ಮಾಡುವುದಕ್ಕೆ ಉಪಯೋಗಿಸಲಾಗುವುದು. ಖಾಯಂ ಮಾಡುವುದಕ್ಕೆ ಸರ್ವಿಸ್ ಆಧಾರ. ಇಷ್ಟು ಸರ್ವಿಸ್ಸಾದರೆ ಮಾಡಬಹುದೆಂದಿದೆ. ಅದರ ಪ್ರಕಾರ ಆಟೋಮ್ಯಾಟಿಕ್ಕಾಗಿ ಆಗುತ್ತದೆ.

ಶ್ರೀ ಟಿ. ಸಿ. ಬನಪ್ಪ.—1947ರಿಂದ ಗ್ರೆಡೇಷ್ಷನ್ ಲಿಸ್ಟನ್ನು ತಯಾರಿಸದಿದ್ದರೆ ಪ್ರಮೋಷ್ಷನ್ ಕೊಡಲು ಅರ್ಹತೆಯಿದೆಯೆ ಎಂಬುದು ಹೇಗೆ ಗೊತ್ತಾಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ನೇಮಕಮಾಡಿದ ತಾರೀಖು ಮುಂತಾದ ತಪಶೀಲೆಲ್ಲಾ ರಿಜಿಸ್ಟರಿನಲ್ಲಿರುತ್ತದೆ.

ಶ್ರೀ ಟಿ. ಸಿ. ಬನಪ್ಪ.—ಈ ಲಿಸ್ಟನ್ನು ಮಾಡದೆ ಡೆಪ್ಯುಟೀ ಕಮಿಷನರು ತಮಗೆ ಬೇಕಾದವರಿಗೆ ಮಾತ್ರ ಪ್ರಮೋಷ್ಷನ್ ಕೊಡಲು ಶಿಫಾರ್ಸು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ. ಅಸ್ಪಷ್ಟವಾಗಿ ಹೇಳಿದ್ದರು. ಎಕ್ಸ್‌ಚೇಂಜ್ ಮಾಡಿದಮೇಲೆ ಅನ್ಯಾಯವಾಗಿಲ್ಲವೆಂದು ವರದಿಯಾಗಿದೆ.

ಶ್ರೀ ಟಿ. ಸಿ. ಬನಪ್ಪ.—ಅನ್ಯಾಯವಾಗಿರುವ ಸಂದರ್ಭಗಳನ್ನು ಗಮನಕ್ಕೆ ತಂದರೆ ಸರಿಪಡಿಸುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು.

Health Committee of Visvesvaraya Canal Atchkat (Membership of Mandya Representative).

Q.—601. **G. S. BOMME GOWDA** (Mandya).—

Will the Government be pleased to state :—

(*a*) whether there is any representative of Mandya area to the Health Committee of the Visvesvaraya Canal atchkat, who is he ;

(*b*) if not appointed, the reason for not so appointing the representative?

A.—**Sri Kadidal MANJAPPA** (Minister for Revenue and Public Works).—

(*a*) All the five non-official members of the Committee are from Mandya District. There is, however, no member from Mandya Taluk.

(*b*) The membership of the Committee has been determined in consultation with the Board in accordance with the relevant provisions in the Government Order constituting the Board.

ಶ್ರೀ ಎಸ್. ಬೊಮ್ಮೇಗೌಡ.—ಈ ಸಂಸ್ಥೆ ರಚನೆಯಾಗ ಮಾನ್ಯ ಸದಸ್ಯರೊಬ್ಬರು ಮಂಡ್ಯ ತಾಲ್ಲೂಕಿನ ಪ್ರತಿನಿಧಿಯಿಲ್ಲವೆಂದು ಹೇಳಿದಾಗ 'ಜಿಲ್ಲಾಬೋರ್ಡ್ ಅಧ್ಯಕ್ಷರು ಆ ತಾಲ್ಲೂಕಿನವರಿದ್ದಾರೆ, ಅದು ರದ್ದಾದ ಮೇಲೆ ಆ ತಾಲ್ಲೂಕಿಗೆ ಬೇರೆಯವರನ್ನು ನೇಮಕ ಮಾಡುತ್ತೇವೆ' ಎಂದು ಮಾನ್ಯ ಮಂತ್ರಿಗಳು ಹೇಳಿರುವುದು ನಿಜವೆ?

ಶ್ರೀ ಕಡಿದಾಳ್ ಮಂಜಪ್ಪ.—ನಿಜ.

ಶ್ರೀ ಎಸ್. ಬೊಮ್ಮೇಗೌಡ.—ಈಗ ಮಂಡ್ಯ ತಾಲ್ಲೂಕಿನ ಜನರು ತಮ್ಮ ಕಷ್ಟಸುಖಗಳನ್ನು ಅರಿಕೆ ಮಾಡಬೇಕಾದರೆ ಮಳವಳ್ಳಿಗೆ ಅಥವಾ ಕೃಷ್ಣರಾಜ ಪೇಟೆಗೆ ಅಥವಾ ಮೈಸೂರಿಗೆ ಹೋಗಬೇಕು, ಇದು ಕಷ್ಟ. ಆದ್ದರಿಂದ ತೊಂದರೆಯಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಸಮಿತಿಯಲ್ಲೂ ಪ್ರತಿ ತಾಲ್ಲೂಕಿಗೂ ಪ್ರಾತಿನಿಧ್ಯ ಕೊಡುವುದು ಕಷ್ಟ.

Sri B. Y. NEELE GOWDA.—May I know whether Government are aware that the health problem in Mandya Taluk is greater and more complicated than it is in other taluks?

Sri Kadidal MANJAPPA.—Health problem is more or less similar in other taluks also except in some dry places.

Sri B. Y. NEELE GOWDA.—May I know whether the Chairman of this sub-committee and other members accept the principle that representation should be given in this sub-committee to such places where there is this problem so that it may be tackled properly?

Sri Kadidal MANJAPPA.—It was brought to my notice that there was need to give representation in this sub-committee; I will consider the question.

Rail-Link between Kottur-Haribar *via* Harapanahalli.

Q.—365. **Sri Ijari SIRASAPPA** (Harapanahalli).—

Will the Government be pleased to state :—